ಏಳು, ಎಂಟನೆಯ ಲೇಖನಗಳಲ್ಲಿ ಸ್ವಾಮೀಜಿ ಸಮಾಜದ ಚೇತರಿಕೆಗಾಗಿ ಸ್ಥಾಪಿಸಿದ ರಾಮಕೃಷ್ಣ ಮಿಶನ್ ಮತ್ತು ಸ್ವಾಭಿಮಾನದ ಜಾಗರಣದಿಂದ ಸ್ವಾತಂತ್ರ್ಯ ಎಂಬ ಅವರ ಚಿಂತನೆಗಳನ್ನು ವಿವರಿಸಿದೆ. ಎಲ್ಲರೂ ಒಂದೇ, ಭಿನ್ನರಲ್ಲ ಎಂಬ ವೇದಾಂತದ ಸತ್ಯದ ಅರಿವು ಮತ್ತು ಮಾನವರಿಗೆ ತಮ್ಮ ದೈವೀಸ್ವಭಾವದ ಅರಿವು ಉಂಟಾದಾಗ ಘರ್ಷಣೆ ತಪ್ಪುತ್ತದೆ.  ಜನಾಂಗದ ಆತ್ಮಶಕ್ತಿಯ ಜಾಗರಣ, ಸ್ವಾಭಿಮಾನ, ನಿರ್ಭೀತಿ ಈಗ ಆಗಬೇಕಾದ ಕಾರ್ಯ.  ಮುಂದಿನ ಲೇಖನಗಳಲ್ಲಿ ವಿಕಾಸಗೊಳ್ಳುವ ವಿಚಾರಗಳು ಇವು: ವೈಯಕ್ತಿಕ ಅನುಭವ ಆಧಾರವಾಗಿರುವ ಧರ್ಮ ಮಾತ್ರ ವಿಶ್ವಾತ್ಮಕವಾಗಬಲ್ಲುದು ಎಂಬ ವ್ಯಾವಹಾರಿಕತೆಯ ಉದಾತ್ತೀಕರಣ, ಯುಕ್ತಿಸಮ್ಮತ ವಿಚಾರ ಸ್ವಾಮೀಜಿಯವರದು. ಶಿಕ್ಷಣ, ಅಧ್ಯಾತ್ಮಸಾಧನೆ, ಸೇವೆ ಮೊದಲಾದ ಕೆಲಸಗಳೆಲ್ಲ ಆತ್ಮಸಮುನ್ನತಿಯ ಗುರಿ ಹೊಂದಿರಬೇಕು ಎಂಬ ಸಮಗ್ರ ದೃಷ್ಟಿ ಅವರದು. ಪಾಶ್ಚಾತ್ಯ ಪೌರಾತ್ಯ ಪರಂಪರೆಗಳ ಉದಾತ್ತ ಅಂಶಗಳನ್ನು ಸಮನ್ವಯಿಸಿದ ರಾಮಕೃಷ್ಣರ ಪ್ರಭಾವ ವಿವೇಕಾನಂದರನ್ನು ರೂಪಿಸಿತು. ಹೀಗಾಗಿ ಅವರು ಮೌಢ್ಯವನ್ನಲ್ಲದೆ ಯಾವುದನ್ನೂ ನಿರಾಕರಿಸಲಿಲ್ಲ, ವಿಕೃತಿಯನ್ನಲ್ಲದೆ ಬೇರಾವುದನ್ನೂ ಟೀಕಿಸಲಿಲ್ಲ. ಶಿಕ್ಷಣದ ಗುರಿ ಚಾರಿತ್ರ್ಯವರ್ಧನೆಯೇ ಹೊರತು ಕೇವಲ ಜ್ಞಾನ ಸಂಗ್ರಹಣೆಯಲ್ಲ.  ಶ್ರದ್ಧೆಯ ಆಧಿಕ್ಯವೇ ಮಹತ್ ಕಾರ್ಯಗಳ ಜನನಿ. ಸ್ವಾಭಿಮಾನ ಮತ್ತು ಆತ್ಮವಿಶ್ವಾಸದಿಂದ ಉಂಟಾದ ಆಂತರಿಕ ಶಕ್ತಿಯೇ ಅಭ್ಯುದಯದ ಚಾಲಕಶಕ್ತಿ. ಪ್ರಾಚ್ಯ ಚಿಂತನೆ ಅಂತರ್ಮುಖಿ ಹಾಗೂ ಪಾಶ್ಚಾತ್ಯ ಚಿಂತನೆ ಬಹಿರ್ಮುಖಿ; ಆದರೆ ಸ್ವಾಮೀಜಿ ಈ ಎರಡು ಧಾರೆಗಳನ್ನು ಸರ್ವಾತ್ಮ ಭಾವನೆಯಿಂದ ಸಮನ್ವಯಗೊಳಿಸಿದರು. ಭಾರತ ತನ್ನ ಸಮಸ್ಯೆಗಳನ್ನು ಪ್ರಜಾಪ್ರಭುತ್ವ ವಿಧಾನದಲ್ಲಿ ಬಗೆಹರಿಸಿಕೊಳ್ಳಲು ವಿವೇಕಾನಂದರ ವೇದಾಂತ ಆಧರಿತ ಮಾನವತಾವಾದದ (‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’) ತಾತ್ತ್ವಿಕತೆಯ ತಳಹದಿ ಸಹಕಾರಿ. ಅರ್ಥವ್ಯವಸ್ಥೆಗೆ ನೈತಿಕ ಆಯಾಮವು ಅನಿವಾರ್ಯ; ಮಾನವ ನಿರ್ಮಾಣ ಎಲ್ಲದರ ಗುರಿಯಾಗಬೇಕು. ಅಭ್ಯುದಯ ಮೇಲಿನಿಂದ ಕೆಳಕ್ಕೆ ಹರಿಯದು; ಕೆಳವರ್ಗಗಳಿಂದ ಉನ್ಮುಖವಾಗಬೇಕು.

ಅಧ್ಯಾಯ ೧೩ರಿಂದ ೧೯ರ ವರೆಗೆ ಈ ಅಭ್ಯುದಯದ ಮಾರ್ಗವನ್ನು ಕುರಿತಾದ ಸ್ವಾಮೀಜಿಯವರ ಚಿಂತನೆಗಳ ವಿಶ್ಲೇಷಣೆ ಇದೆ. ವ್ಯಕ್ತಿಯ ಸಾಮಾಜಿಕೀಕರಣವು ನೈಜ ಅಧ್ಯಾತ್ಮಾಭಿಮುಖತೆಯ ಸಹಜ ವಿಸ್ತಾರ. ಸಂಘರ್ಷಕ್ಕಿಂತ ಕ್ರೋಡೀಕರಣ ಶಿಕ್ಷಣದ ಗುರಿಯಾಗಬೇಕು. ಸಾರ್ವಜನಿಕ ಜೀವನದ ಸ್ಥಗಿತತೆ ಹೋಗಬೇಕು – ಇದಕ್ಕೆ ಚಾಲಕ ಶಕ್ತಿ ಆಧ್ಯಾತ್ಮಿಕ ಅರಿವು. ಉತ್ಕರ್ಷವೆಂದರೆ ವೈಯಕ್ತಿಕತೆ ಪ್ರಬಲವಾಗುವ ಶ್ರೀಮಂತಿಕೆಯಲ್ಲ, ಮಾನವ ವೈಯಕ್ತಿಕತೆಯಿಂದ ಹೊರಬಂದು, ಆಂತರಿಕ ವಿಕಾಸದ, ಸಾಮುದಾಯಿಕತೆಯ ಉದಾತ್ತ ಚಿಂತನೆಗೆ ತೆರೆದುಕೊಳ್ಳುವುದು. ಈ ವೇದಾಂತಕ್ಕೆ ಸರಿ ಹೊಂದುವ ಸಾಮರಸ್ಯ ಆಧಾರಿತ ಅಭ್ಯುದಯದ ಲಕ್ಷಣಗಳು ಆತ್ಮವಿಕಾಸ, ಒಳಗಿನ ಶಕ್ತಿ ಪ್ರಕಟಗೊಳ್ಳುವುದರಿಂದ ಗತಿಶೀಲತೆ, ಭೌತ-ಅಧ್ಯಾತ್ಮಗಳ ಸಮನ್ವಯ. ಸ್ವದೇಶೀಕರಣಗೊಂಡ ಶಿಕ್ಷಣವು ಸ್ವಾವಲಂಬನದ ಸಾಧನವಾಗಿ, ವ್ಯಕ್ತಿತ್ವ ನಿರ್ಮಾಣ ಮಾಡುವುದು. ಮಹಿಳಾ ಶಿಕ್ಷಣದಿಂದ ಅಂತಃಶಕ್ತಿಯ ಉದ್ದೀಪನವಾಗಿ, ಎಲ್ಲ ವರ್ಗಗಳ ಸಮಗ್ರ ಅಭ್ಯುದಯ ಸಾಧ್ಯವಾಗುವುದು. ಜ್ಞಾನ-ವಿಜ್ಞಾನಗಳ ಮಧ್ಯೆ ಸಂಘರ್ಷವಿರದೆ ಅವು ಅಂತರ್ಬೋಧೆಯಿಂದ ಬೆಳೆಯುತ್ತವೆ. ಪದಾರ್ಥ, ಶಕ್ತಿ ಇವು ಪರಸ್ಪರ ಪರಿವರ್ತನೀಯವೆಂದು ಐನ್‌ಸ್ಟೀನ್ ಹೇಳುವ ಮೊದಲೇ ಕಣಾದ ಮಹರ್ಷಿ ಪ್ರತಿಪಾದಿಸಿದ್ದನು. ಹೀಗೆ ವೇದಾಂತವು ವಿಜ್ಞಾನ ವಿರೋಧಿಯಾಗಿಲ್ಲ, ಎರಡೂ ಪ್ರಜ್ಞಾಮೂಲ ವಾದ ಜ್ಞಾನದ ಸ್ಪಂದನಗಳೇ.

ಇನ್ನುಳಿದ ಲೇಖನಗಳು ವಿವೇಕಾನಂದರಿಂದ ಸಂಚಲನೆಗೊಂಡ ನವ ಚಿಂತನಗಳು ತರುಣರಲ್ಲಿ ಪ್ರೇರಣೆಯನ್ನು ಉಂಟುಮಾಡಿದ ರೀತಿ, ಅವರ ಪರಿಣಾಮಕಾರೀ ಸಂವಹನ, ಅವರ ಜೊತೆಗಿದ್ದ ಪ್ರಭಾವಲಯ, ನೇತಾಜಿಯಂತಹವರನ್ನು ರೂಪಿಸಿದ್ದು, ನಮ್ಮಲ್ಲಿ ಧರ್ಮವೇ ರಾಷ್ಟ್ರ ಚೈತನ್ಯದ ಮೂಲ, ಅದು ತನ್ನ ಸ್ವರೂಪದಲ್ಲೆ ವಿಶ್ವಾತ್ಮಕವಾಗಿರುವುದು ಎಂಬ ವಿಚಾರಗಳನ್ನು ವಿಸ್ತರಿಸಿವೆ.

ಒಟ್ಟಿನಲ್ಲಿ ಕಿರಣದ ಹಾದಿಯಲ್ಲಿ ಪಟ್ಟಕ ವನ್ನು(ಪ್ರಿಸಂ) ಇಟ್ಟು ಅದರಲ್ಲಿನ ಹಲವು ಬಣ್ಣಗಳನ್ನು ಬೇರೆ ಬೇರೆಯಾಗಿ ಸ್ಫುಟೀಕರಿಸಿ ತೋರಿಸಿದಂತೆ ವಿವೇಕಾನಂದ ವಿಚಾರಗಳ ಹಲವು ಮುಖಗಳನ್ನು, ಅವುಗಳ ವೈಶಿಷ್ಟ್ಯವನ್ನು ಇಲ್ಲಿನ ಲೇಖನಗಳು ಎತ್ತಿ ತೋರಿಸುತ್ತವೆ. ಬಹುಶಃ ವಿವೇಕಾನಂದರ ೧೫೦ನೇ ಜನ್ಮವರ್ಷಾಚರಣೆಯನ್ನು ಸರಣಿ ಲೇಖನಗಳ ಮೂಲಕ ಆಚರಿಸಿದ್ದು ಉತ್ಥಾನವೊಂದೇ. ಶ್ರೀರಾಮಕೃಷ್ಣ ಆಶ್ರಮದ ಪ್ರಕಟನೆಗಳನ್ನು ಬಿಟ್ಟರೆ ಮಾಸಪತ್ರಿಕೆಯೊಂದು ಈ ಬಗೆಯ ಗಂಭೀರ ಪ್ರಯತ್ನ ಮಾಡಿದುದು ಸ್ವಾಗತಾರ್ಹ. ಪುಸ್ತಕ ತುಂಬ ಆಕರ್ಷಕವಾಗಿದ್ದು, ಸುಂದರವಾಗಿ ಮುದ್ರಿತವಾಗಿದೆ.  ಪ್ರತಿ ಲೇಖನಕ್ಕೆ ಹಿನ್ನೆಲೆಯಾಗಿ ವಿವೇಕಾನಂದ ವಾಣಿಯ ಉದ್ಘೋಷವನ್ನು ಉತ್ತಮ ಅನುವಾದದೊಡನೆ ಕೊಡಲಾಗಿದೆ. ಹೆಚ್ಚು ಜನರಿಗೆ ಗೊತ್ತಿಲ್ಲದ ಹಳೆಯ ನಿದರ್ಶನಗಳು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.  ಉದಾಹರಣೆಗೆ ರಕ್ಷಣಾ ಮಂತ್ರಿ ಬಾಬು ಜಗಜೀವನರಾಂ ಭಾಷಣದ ತುಣುಕು. ಚಾರಿತ್ರಿಕ ಪ್ರಜ್ಞೆಯುಳ್ಳ ಇಂತಹ ಪುಸ್ತಕಗಳು ಹೆಚ್ಚು ಸಂಖ್ಯೆಯಲ್ಲಿ ಬರಬೇಕಾಗಿದೆ.

ಕೊರತೆಗಳೂ ಕೆಲವು ಇವೆ. ಮುಖ್ಯವಾದುದು ಭಾಷಾಗಾಂಭೀರ್ಯ. ಸಂಸ್ಕೃತಭೂಯಿಷ್ಠವಾದ ಭಾಷೆಯ ವೇಗ ಓದನ್ನು ತಡೆಯುವಂತಿದೆ.  ಗಹನವಾದ ವಿಚಾರವನ್ನು ಹೇಳುವಾಗ ಭಾಷೆ ಗಂಭೀರವಾಗಿರಬೇಕೆಂಬುದು ಒಪ್ಪಿತವಾದ ವಿಚಾರವಾದರೂ, ಸರಳವಾಗಿ ಹೇಳಬಾರದೆಂದಿಲ್ಲ. ಕನ್ನಡ ಪತ್ರಿಕಾ ಭಾಷೆ ಸರಳವಾಗಿದ್ದು, ಈಚೆಗೆ ವಿಜ್ಞಾನ ವಿಷಯಗಳನ್ನೂ ಸುಲಭವಾಗಿ ಅರ್ಥವಾಗುವಂತೆ ಬರೆಯಲಾಗುತ್ತಿದೆ. ವಿವೇಕಾನಂದರ, ಸೋದರಿ ನಿವೇದಿತಾ ಇವರ ಭಾಷೆ ಅನುವಾದಕ್ಕೆ ಹೊಂದದಷ್ಟು ಕ್ಲಿಷ್ಟ; ಆದರೆ ಉಜ್ವಲ, ಪ್ರೇರಕ. ಲೇಖಕರು ಕಡಿಮೆ ಪುಟಗಳಲ್ಲಿ ಹೆಚ್ಚು ವಿಚಾರಗಳನ್ನು ತಿಳಿಸಿರುವುದು ಅಭಿನಂದನಾರ್ಹ; ಆದರೆ ಸರಳ ಭಾಷೆಯನ್ನು ಉಪಯೋಗಿಸಿದ್ದರೆ ಚೆನ್ನಾಗಿತ್ತು.

*–ಡಾ. ಹೆಚ್. ಪಾಂಡುರಂಗ ವಿಠಲ* *




# ಲಂಕಾಲಕ್ಷ್ಮಿ


ಕಥೆ: ರೇವತಿ


ಚಿತ್ರ: ಕೋವಿ




4
ವಾಯುಪುತ್ರನಾದ ಹನುಮಂತನು ಸೀತಾದೇವಿಯನ್ನು ಹುಡುಕುತ್ತ ಲಂಕೆಗೆ ಬರುವನು. ಅವನ ಕೈಯಿಂದ ಏಟು ತಿಂದಾಗಲೇ ನೀನು ಶಾಪದಿಂದ ಬಿಡುಗಡೆ ಹೊಂದುವೆ.


5
ವನವಾಸ ಮಾಡುತ್ತಿದ್ದ ಶ್ರೀರಾಮನು ಒಂದು ದಿನ ಬೇರೆಲ್ಲಿಗೋ ಹೋಗಿದ್ದಾಗ, ರಾವಣ ಸೀತೆಯನ್ನು ಅಪಹರಿಸಿದ.


6
ಲಂಕೆಯ ಅಶೋಕವನದಲ್ಲಿ ಅವಳನ್ನು ಬಂಧಿಸಿ ಇಟ್ಟ.


7
ಶ್ರೀರಾಮನು ಕಿಷ್ಕಿಂಧೆಗೆ ಹೋಗಿ, ಅಲ್ಲಿನ ಕಪಿವೀರನಾದ ಸುಗ್ರೀವನೊಂದಿಗೆ ಸ್ನೇಹ ಬೆಳೆಸಿದ. ಅನಂತರ ಸುಗ್ರೀವನ ವೈರಿಯಾದ ವಾಲಿಯನ್ನು ಕೊಂದು, ಸುಗ್ರೀವನನ್ನೇ ಕಿಷ್ಕಿಂಧೆಯ ರಾಜನನ್ನಾಗಿ ಮಾಡಿದ.
8
ಸುಗ್ರೀವನ ಆಜ್ಞೆಯಂತೆ ಕಪಿವೀರರೆಲ್ಲರೂ ಸೀತಾದೇವಿಯನ್ನು ಹುಡುಕಲು ಹೊರಟರು. ಹನುಮಂತನೂ ಅವರಲ್ಲೊಬ್ಬ.

**9** ಪಕ್ಷಿಗಳ ರಾಜನಾದ ಸಂಪಾತಿಯಿಂದ ಹನುಮಂತನಿಗೆ ಸೀತಾದೇವಿ ಲಂಕೆಯಲ್ಲಿ ಬಂಧನದಲ್ಲಿರುವ ವಿಚಾರ ತಿಳಿಯಿತು.

**10** ಕಪಿವೀರರಾದ ಜಾಂಬವಂತ, ಅಂಗದ ಮೊದಲಾದವರು ಹನುಮಂತನ ಬಳಿಗೆ ಬಂದರು.




**11** ಹನುಮಂತ ಸಮುದ್ರವನ್ನೇ ನೆಗೆದು ಲಂಕೆಯಲ್ಲಿ ಬಂದಿಳಿದ.

**12** ಭವ್ಯವಾಗಿ ಬೆಳಗುತ್ತಿದ್ದ ಲಂಕಾನಗರದ ಉತ್ತರ ದಿಕ್ಕಿನ ಮಹಾದ್ವಾರದ ಮುಂದೆ ಬಂದು ನಿಂತ ಹನುಮಂತ.




**13** ಅಣುವಿನಂತೆ ಸಣ್ಣ ಆಕಾರ ತಾಳಿದ ಹನುಮಂತ ದ್ವಾರವನ್ನು ದಾಟಿ ಒಳಕ್ಕೆ ಬಂದ. ಅಲ್ಲಿ ಅವನು ರಾಕ್ಷಸಿಯಾಗಿ ನಿಂತಿದ್ದ ವಿಜಯಲಕ್ಷ್ಮಿಯ ಮುಂದೆ ನಿಂತ.

